<u>**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**</u>

<u>**ಪೊನ್ನಂಪೇಟೆ.**</u>

**ಸಿ.ಸಿ. ನಂ. 729/2025** **ಫಿರ್ಯಾ.ಸಾ – 10**

**ಚಾ.ಸಾ – 17**

<u>**ದಿನಾಂಕಃ 18.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

| | | |
|---|---|---|
| ಸಾಕ್ಷಿಯ ಹೆಸರು | : | ರಮ್ಯ ಆರ್ |
| ತಂದೆಯ ಹೆಸರು | : | ರವಿಕುಮಾರ್ |
| ವಯಸ್ಸು | : | 24ವರ್ಷ |
| ಉದ್ಯೋಗ | : | ಮಹಿಳಾ ಪೇದೆ |
| ವಾಸ ಸ್ಥಳ | : | ಪೊನ್ನಂಪೇಟೆ |

<u>**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**</u>

ನಾನು ದಿ. 17.07.2022 ರಿಂದ ಇಲ್ಲಿಯವರೆಗೆ ಪೊನ್ನಂಪೇಟೆ ಪೊ. ಠಾಣೆಯಲ್ಲಿ ಮಹಿಳಾ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 24.06.2023 ರಂದು ಚಾಸಾ 1 ರವರು ವಾಸವಿರುವ ಬಾಡಿಗೆ ಮನೆಯಲ್ಲಿ ಈ ಪ್ರಕರಣದ ತನಿಖೆಯಾದಿಕಾರಿಯಾದ ಚಾಸಾ 22 ರವರು ಹೇಳಿದಂತೆ ಕೃತ್ಯ ಸ್ಥಳದ ಮಹಜರ್ ಅನ್ನು ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ ಮತ್ತು ಅದೇದಿನ ಕೃತ್ಯ ಸ್ಥಳ ಮತ್ತು ಸ್ವತ್ತು ಅಮಾನತು ಮಹಜರ್ ವೇಳೆ ಫೋಟೋ ತೆಗೆದಿರುತ್ತೇನೆ ಹಾಗೂ ತನಿಖಾದಿಕಾರಿವರಿಗೆ ನೀಡಿರುತ್ತೇನೆ. ಈ ಸಂಬಂದ ನಾನು electronic evidence certificate ಕೊಟ್ಟಿರುತ್ತೇನೆ.

ಸಾಕ್ಷಿಯು ನಿ ಪಿ 3 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ಸ್ಥಳ ಮತ್ತು ಸ್ವತ್ತು ಅಮಾನತು ಮಹಜರ್ ವೇಳೆ ತೆಗೆದ ಫೋಟೋಗಳಾದ ನಿ ಪಿ 4, 5, 7 ಮತ್ತು 8 ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು electronic evidence certificate ಅನ್ನು

ನೋಡಿ ಗುರುತಿಸಿದ್ದು ಅದನ್ನು ನಿ ಪಿ 36 ಎಂದು ಸಹಿಯನ್ನು ನಿ ಪಿ 36(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಹೆಚ್. ಎನ್ ವಕೀಲರಿಂದಃ**

ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ